# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **83** |
| ಸದಸ್ಯರ ಹೆಸರು | : | ಶ್ರೀ ಚಿದಾನಂದ್.ಎಂ.ಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 11-08-2025 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಸಚಿವರು |

***

| | ಪ್ರಶ್ನೆ | ಉತ್ತರ |
|---|---|---|
| ಅ) | 2025ನೇ ಸಾಲಿನಲ್ಲಿ ವಿದ್ಯುತ್ ಸಂಪರ್ಕ ಕೋರಿ ಹೆಸ್ಕಾಂಗಳಿಗೆ ಬಂದ ಅರ್ಜಿಗಳ ಸಂಖ್ಯೆ ಎಷ್ಟು; (ಹೆಸ್ಕಾಂವಾರು ವಿವರ ನೀಡುವುದು) | ಆರ್ಥಿಕ ವರ್ಷ 2024-25 ಮತ್ತು 2025-26ನೇ ಸಾಲಿನಲ್ಲಿ (ಏಪ್ರಿಲ್ 2025 ರಿಂದ ಜುಲೈ 2025 ರ ಅಂತ್ಯಕ್ಕೆ) ವಿದ್ಯುತ್ ಸಂಪರ್ಕ ಕೋರಿ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಸ್ವೀಕೃತವಾದ ಎಲ್ಲಾ ಜಕಾತಿಯ ಅರ್ಜಿಗಳು, ವಿದ್ಯುತ್ ಸಂಪರ್ಕ ನೀಡಿರುವ ಮತ್ತು ಬಾಕಿಯಿರುವ ಅರ್ಜಿಗಳ ಸಂಖ್ಯೆಗಳ ಎಸ್ಕಾಂವಾರು ವಿವರಗಳನ್ನು **ಅನುಬಂಧ-1**ರಲ್ಲಿ ಒದಗಿಸಿದೆ |
| ಆ) | ಇಲ್ಲಿಯವರೆಗೆ ಎಷ್ಟು ಸಂಪರ್ಕ ನೀಡಲಾಗಿದೆ; ಬಾಕಿಯಿರುವ ಅರ್ಜಿಗಳ ಸಂಖ್ಯೆ ಎಷ್ಟು; (ಹೆಸ್ಕಾಂವಾರು ವಿವರ ನೀಡುವುದು) | |
| ಇ) | ವಿದ್ಯುತ್ ಸಂಪರ್ಕಕ್ಕಾಗಿ ಸುಪ್ರೀಂ ಕೋರ್ಟ್ ಸಿಸಿ ಮತ್ತು ಓಸಿಯನ್ನು ಪಡೆಯುವಂತೆ ಆದೇಶಿಸಿದ ದಿನಾಂಕ ಯಾವುದು; ಇಂಧನ ಇಲಾಖೆ ಇದರ ಬಗ್ಗೆ ಯಾವ ದಿನಾಂಕದಂದು ಸುತ್ತೋಲೆ ಹೊರಡಿಸಿದೆ; (ಸುತ್ತೋಲೆಯ ಪ್ರತಿಯನ್ನು ನೀಡುವುದು) | ವಿದ್ಯುತ್ ಸಂಪರ್ಕಕ್ಕಾಗಿ ಸಿಸಿ ಮತ್ತು ಒಸಿಯನ್ನು ಪಡೆಯುವಂತೆ ಮಾನ್ಯ ಘನ ಸರ್ವೋಚ್ಚ ನ್ಯಾಯಾಲಯವು ದಿನಾಂಕ: 17.12.2024 ರಂದು ಆದೇಶವನ್ನು ಹೊರಡಿಸಿದೆ.<br>ಇಂಧನ ಇಲಾಖೆಯು ಮಾನ್ಯ ಘನ ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ಅನುಷ್ಠಾನಗೊಳಿಸಲು ನಿಯಮಾನುಸಾರ ಅಗತ್ಯ ಕ್ರಮವಹಿಸುವಂತೆ ದಿನಾಂಕ 04.01.2025ರ ಪತ್ರದಲ್ಲಿ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳಿಗೆ ನಿರ್ದೇಶಿಸಲಾಗಿರುತ್ತದೆ. ಇಂಧನ ಇಲಾಖೆಯ ಪತ್ರದ ಪ್ರತಿಯನ್ನು **ಅನುಬಂಧ-2**ರಲ್ಲಿ ಒದಗಿಸಿದೆ). |
| ಈ) | ಸುಪ್ರೀಂ ಕೋರ್ಟ್ ತೀರ್ಪಿಗೆ ಮುಂಚಿತವಾಗಿ ಅರ್ಜಿ ಸಲ್ಲಿಸಿ, ಠೇವಣಿ ಪಾವತಿಸಿರುವ ಅರ್ಜಿದಾರರಿಗೂ ಸಹ ವಿದ್ಯುತ್ ಸಂಪರ್ಕ ನೀಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇವರಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; | ಮಾನ್ಯ ಘನ ಸರ್ವೋಚ್ಚ ನ್ಯಾಯಾಲಯ ಆದೇಶ ಹೊರಡಿಸಿರುವ ದಿನಾಂಕ 17.12.2024 ರಿಂದ, ವಿದ್ಯುತ್ ಸರಬರಾಜು ಕಂಪನಿಗಳು ಹೊಸ ಶಾಶ್ವತ ವಿದ್ಯುತ್ ಸಂಪರ್ಕ ಸಲ್ಲಿಸುವ/ಪಡೆಯಲಿಚ್ಛಿಸುವ ಗ್ರಾಹಕರಿಗೆ, ಸದರಿ ಕಟ್ಟಡಕ್ಕೆ ಸಂಬಂಧಿಸಿದಂತೆ ಸಕ್ಷಮ/ಸ್ಥಳೀಯ ಪ್ರಾಧಿಕಾರ ನೀಡಲ್ಪಟ್ಟ ವಾಸಯೋಗ್ಯ/ ಸ್ವಾಧೀನಾನುಭವ ಪ್ರಮಾಣಪತ್ರವನ್ನು ಸಲ್ಲಿಸುವುದು ಕಡ್ಡಾಯಗೊಳಿಸಲಾಗಿರುತ್ತದೆ.<br>ಅರ್ಜಿದಾರರು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆಇಆರ್‌ಸಿ), ಕರ್ನಾಟಕ ಸರ್ಕಾರ ಮತ್ತು ನ್ಯಾಯಾಲಯದ ಆದೇಶಗಳಲ್ಲಿ ನಿರ್ದಿಷ್ಟಪಡಿಸಲಾದ |

| | | |
|---|---|---|
| ಉ) | ಕಂದಾಯ ನಿವೇಶನ ಮತ್ತು ಬಿ ಖಾತಾಗಳಿಗೆ ಸಿಸಿ ಮತ್ತು ಓಸಿ ಸಿಗದ ಕಾರಣ ವಿದ್ಯುತ್ ಸಂಪರ್ಕ ಸಗದೆ ಸಾರ್ವಜನಿಕರು ತೊಂದರೆಗೆ ಸಿಲುಕುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದರ ಪರಿಹಾರಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು; | ಎಲ್ಲಾ ಅಗತ್ಯ ದಾಖಲೆಗಳನ್ನು ಸಲ್ಲಿಸಿದಲ್ಲಿ, ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ವಿದ್ಯುತ್ ಸಂಪರ್ಕ ನೀಡಲಾಗುವುದು.<br><br>OC / CC ನೀಡುವ ಮತ್ತು ಕಟ್ಟಡಗಳ ನಿರ್ಮಾಣ ಹಂತದಲ್ಲಿ ಅನುಮೋದಿತ ನಕ್ಷೆಯಂತೆ ನಿರ್ಮಾಣವಾಗುತ್ತಿರುವ ಬಗ್ಗೆ ಮೇಲ್ವಿಚಾರಣೆಯ ಅಧಿಕಾರವು ನಗರಾಭಿವೃದ್ಧಿ ಮತ್ತು RDPR ಇಲಾಖೆಯ ವ್ಯಾಪ್ತಿಯದಾಗಿರುತ್ತದೆ. |
| ಊ) | ಸಣ್ಣ ಕೈಗಾರಿಕೆಗಳಿಗೂ ಸಹ ಸಿಸಿ ಮತ್ತು ಓಸಿ ಕಡ್ಡಾಯ ಮಾಡಿರುವ ಕಾರಣ ಹಲವು ಕೈಗಾರಿಕೆಗಳು ವಿದ್ಯುತ್ ಸಂಪರ್ಕದ ಕೊರತೆಯುಂಟಾಗಿ, ಉತ್ಪಾದನೆ, ಉದ್ಯೋಗ ಮತ್ತು ಸ್ಥಳೀಯ ಕಚ್ಚಾ ಸಂಪನ್ಮೂಲ ಸದುಪಯೋಗ ಪಡಿಸಿಕೊಳ್ಳಲು ಸಾಧ್ಯವಾಗದೆ ಸಮಸ್ಯೆ ಯುಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಕೈಗಾರಿಕೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಮಾನ್ಯ ಘನ ಸರ್ವೋಚ್ಛ ನ್ಯಾಯಾಲಯದ ಆದೇಶವು ಆದೇಶಿತ ದಿನಾಂಕದಿಂದಲೇ ಜಾರಿಯಾಗಿರುವುದರಿಂದ. ಯಾವುದೇ ವಿಧದ ವ್ಯತ್ಯಾಸ/ಅಂತರವಿಲ್ಲದೆ ಎಲ್ಲಾ ಅರ್ಜಿದಾರರಿಗೂ ಈ ಆದೇಶವು ಅನ್ವಯವಾಗುತ್ತದೆ. |
| ಋ) | ಸುಪ್ರೀಂ ಕೋರ್ಟ್ ಆದೇಶಕ್ಕೂ ಮುನ್ನ ನಿರ್ಮಾಣವಾಗಿರುವ ಎಲ್ಲಾ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | |

ಸಂಖ್ಯೆ: ಎನರ್ಜಿ 168 ಇಬಿಎಸ್ 2025

(ಕೆ.ಜೆ.ಜಾರ್ಜ್)
ಇಂಧನ ಸಚಿವರು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಚಿದಾನಂದ್.ಎಂ.ಗೌಡ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:83ಕ್ಕೆ ಅನುಬಂಧ-1:**

**ಆರ್ಥಿಕ ವರ್ಷ 2024-25 ಮತ್ತು 2025-26ನೇ ಸಾಲಿನಲ್ಲಿ (ಏಪ್ರಿಲ್ 25 ರಿಂದ ಜುಲೈ 25 ರ ಅಂತ್ಯಕ್ಕೆ) ವಿದ್ಯುತ್ ಸಂಪರ್ಕ ಕೋರಿ ಎಸ್ಕಾಂಗಳಿಗೆ ಬಂದ ಎಲ್ಲಾ ಜಕಾತಿ ( ಎಲ್.ಟಿ 1 to 6 & ಹೆಚ್.ಟಿ 1 to 7) ಅರ್ಜಿಗಳು, ವಿದ್ಯುತ್ ಸಂಪರ್ಕ ನೀಡಿರುವ ಮತ್ತು ಬಾಕಿಯಿರುವ ಅರ್ಜಿಗಳ ಸಂಖ್ಯೆಗಳ ಎಸ್ಕಾಂವಾರು ವಿವರಗಳು:**

**ಆರ್ಥಿಕ ವರ್ಷ : 2024-25**

| ವಿ.ಸ.ಕಂಪನಿ ಹೆಸರು | ಓಪನಿಂಗ್ ಬ್ಯಾಲೆನ್ಸ್ | ವಿದ್ಯುತ್ ಸಂಪರ್ಕ ಕೋರಿ ಬಂದ ಅರ್ಜಿಗಳ ಸಂಖ್ಯೆ | ಒಟ್ಟು ಅರ್ಜಿಗಳ ಸಂಖ್ಯೆ | ತಿರಸ್ಕೃತಗೊಂಡ ಅರ್ಜಿಗಳ ಸಂಖ್ಯೆ | ವಿದ್ಯುತ್ ಸಂಪರ್ಕ ಪಡೆದ ಅರ್ಜಿಗಳ ಸಂಖ್ಯೆ | ಬಾಕಿ ಉಳಿದಿರುವ ಅರ್ಜಿಗಳ ಸಂಖ್ಯೆ |
|---|---|---|---|---|---|---|
| | 1 | 2 | 3=1+2 | 4 | 5 | 6=3-4-5 |
| ಬೆಸ್ಕಾಂ | 21,210 | 5,95,526 | 6,16,736 | 42,933 | 5,00,127 | 73,676 |
| ಮೆಸ್ಕಾಂ | 10,576 | 1,28,165 | 1,38,741 | 15,348 | 96,584 | 26,809 |
| ಸೆಸ್ಕ್ | 4,231 | 1,07,822 | 1,12,053 | 16,529 | 71,236 | 24,288 |
| ಹೆಸ್ಕಾಂ | 16,930 | 2,02,051 | 2,18,981 | 22,758 | 1,50,327 | 45,896 |
| ಜೆಸ್ಕಾಂ | 40,175 | 1,12,829 | 1,53,004 | 19,996 | 74,678 | 58,330 |
| **ಒಟ್ಟು** | **93,123** | **1,14,6395** | **12,39,515** | **1,17,568** | **8,92,957** | **2,28,999** |

**ಆರ್ಥಿಕ ವರ್ಷ : 2025-26 ( ಏಪ್ರಿಲ್ 25 ರಿಂದ ಜುಲೈ 25 ರ ಅಂತ್ಯಕ್ಕೆ)**

| ವಿ.ಸ.ಕಂಪನಿ ಹೆಸರು | ಓಪನಿಂಗ್ ಬ್ಯಾಲೆನ್ಸ್ | ವಿದ್ಯುತ್ ಸಂಪರ್ಕ ಕೋರಿ ಬಂದ ಅರ್ಜಿಗಳ ಸಂಖ್ಯೆ | ಒಟ್ಟು ಅರ್ಜಿಗಳ ಸಂಖ್ಯೆ | ತಿರಸ್ಕೃತಗೊಂಡ ಅರ್ಜಿಗಳ ಸಂಖ್ಯೆ | ವಿದ್ಯುತ್ ಸಂಪರ್ಕ ಪಡೆದ ಅರ್ಜಿಗಳ ಸಂಖ್ಯೆ | ಬಾಕಿ ಉಳಿದಿರುವ ಅರ್ಜಿಗಳ ಸಂಖ್ಯೆ |
|---|---|---|---|---|---|---|
| | 1 | 2 | 3=1+2 | 4 | 5 | 6=3-4-5 |
| ಬೆಸ್ಕಾಂ | 73,676 | 33,388 | 1,07,064 | 3,841 | 9,639 | 94,584 |
| ಮೆಸ್ಕಾಂ | 26,809 | 53,308 | 80,117 | 5,203 | 36,141 | 38,773 |
| ಸೆಸ್ಕ್ | 24,288 | 35,461 | 59,749 | 4,967 | 36,699 | 18,083 |
| ಹೆಸ್ಕಾಂ | 45,896 | 53,111 | 99,007 | 8,584 | 24,067 | 66,356 |
| ಜೆಸ್ಕಾಂ | 58,330 | 26,212 | 84,542 | 3,938 | 8,074 | 72,530 |
| **ಒಟ್ಟು** | **2,28,999** | **2,01,480** | **4,30,479** | **26,533** | **1,13,620** | **2,90,326** |

ಅನುಬಂಧ - 2

ಕರ್ನಾಟಕ ಸರ್ಕಾರ

M.D.
13 JAN 2025
GESCOM

ಸಂಖ್ಯೆ: ಎನರ್ಜಿ 943 ಇಆಬಿ 2024
Encl: Mail sent to M.D mail I.D

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:04.01.2025

ಇವರಿಂದ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ಇಂಧನ ಇಲಾಖೆ,
ಬೆಂಗಳೂರು.

ಇವರಿಗೆ:

1. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಬೆಂಗಳೂರು.
3. ವ್ಯವಸ್ಥಾಪಕ ನಿರ್ದೇಶಕರು, ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್, ಬೆಂಗಳೂರು.
4. ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ, ಬೆಂಗಳೂರು.
5. ವ್ಯವಸ್ಥಾಪಕ ನಿರ್ದೇಶಕರು, ಮಂಗಳೂರು ವಿದ್ಯುತ್ ಸರಬರಾಜು ಕಂಪನಿ, ಮಂಗಳೂರು.
6. ವ್ಯವಸ್ಥಾಪಕ ನಿರ್ದೇಶಕರು, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿ, ಮೈಸೂರು.
7. ವ್ಯವಸ್ಥಾಪಕ ನಿರ್ದೇಶಕರು, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ, ಹುಬ್ಬಳ್ಳಿ.
8. ವ್ಯವಸ್ಥಾಪಕ ನಿರ್ದೇಶಕರು, ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ, ಕಲಬುರಗಿ.
9. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು.
10. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಕಾರ್ಖಾನೆ, ಬೆಂಗಳೂರು.
11. ವ್ಯವಸ್ಥಾಪಕ ನಿರ್ದೇಶಕರು, ಎಂ.ಇ.ಐ., ಬೆಂಗಳೂರು.
12. ಮುಖ್ಯ ವಿದ್ಯುತ್ ಪರಿವೀಕ್ಷಕರು, ವಿದ್ಯುತ್ ಪರಿವೀಕ್ಷಣಾಲಯ, ಬೆಂಗಳೂರು.

| | |
|---|---|
| D(T) | GE(O) |
| CFO | FA(I/A) |
| GM(A&HRD) | DCA(HRD/Pen.) |
| SE/EE(Projects) | IPDS |
| | Soubhagya |
| | Sub.Stations |
| | DDUGJY |
| SE/EE(Tech.) | GK |
| | Energy Audit |
| SE/EE(MIS) | SE/EE(Comml.) |
| SE/EE(MMT) | SE/EE(Proc.) |
| | DSP/EE(Vig) |
| EE(SCADA) | EE(TA&QC) |
| EE(NJY) | EE(APDRP) |
| EE/DCA(RA) | EE(PTC) |
| EE(DSM) | EE(Civil) |
| ಆಪ್ತ ಸಹಾಯಕರು | CS |
| Sr.PS | TA |

MD

ಮಾನ್ಯರೇ,

ವಿಷಯ: ವಿದ್ಯುತ್ ಸಂಪರ್ಕ ಪಡೆಯಲು ವಾಸಯೋಗ್ಯ ಪ್ರಮಾಣ ಪತ್ರ ಕಡ್ಡಾಯಗೊಳಿಸುವ ಬಗ್ಗೆ.

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ವೀರೇಶ್ ಬೇಲೂರು ಇವರು ಮಿಂಚಂಚೆ ಮೂಲಕ ಸಲ್ಲಿಸಿರುವ ದಿನಾಂಕ:20.12.2024ರ ಪತ್ರ ಮತ್ತು ಅಡಕಗಳನ್ನು ಇದರೊಂದಿಗೆ ಲಗತ್ತಿಸಿದೆ. ಸದರಿ ಪತ್ರದಲ್ಲಿ ಕೋರಿರುವಂತೆ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲು ಸಂಖ್ಯೆ:14604/2024ರಲ್ಲಿ ದಿನಾಂಕ:17.12.2024ರಂದು ನೀಡಿರುವ ತೀರ್ಪಿನನ್ವಯ ಪರಿಶೀಲಿಸಿ, ನಿಯಮಾನುಸಾರ ಅಗತ್ಯ ಕ್ರಮ ವಹಿಸುವಂತೆ ತಮ್ಮನ್ನು ಕೋರಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,

(ವಿನೋದ್ ಕುಮಾರ್ ಡಿ.ಎಂ)
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

SCOM (Computer No. 1020015)

Scanned with CamScanner